'ಮಗ್ಗಿಗೆ 'ಜಜ್ಜೀಬಿಶಾನ್' ತೋರ್ಸೋಕೆ ಕರ್ಕೊಂಡ್ ಬಂದ್ಯಾ ಗಂಗಾ?'

'ಹೌಂದ್ರೀ....'

ಆತ ನಗುತ್ತ ಪಾಪೂನ ಕೆನ್ನೆ ಸವರಿ ಹೊರಟು ಹೋದ. ಪಾಪೂಗೆ ಆತ ಕೆನ್ನೆ ಮುಟ್ಟಿದ್ದು ಇಷ್ಟವಾಗಲಿಲ್ಲ... 'ಆ ಕಪ್ಪು ಮನುಷ್ಯ ನಂಗ್ಯಾಕೆ ಮುಟ್ಟಿದ?... ಗಲೀಜು ಅನ್ನಸ್ತು...' ಎಂದು ಕೆನ್ನೆ ಒರೆಸಿಕೊಂಡಳು.

ಗಂಗೆ ನಗುತ್ತಾ, 'ಅವ್ರು ನೀ ಸಣ್ಣ ಕೂಸಾಗಿದ್ದನಿಂದ ನಿನ್ನ ನೋಡ್ತಾರೆ ಒಳ್ಳೇವ್ರು ಅದಾರ...' ಎಂದು ಸಮಾಧಾನ ಪಡಿಸಿದಳು.

ವಿಜಯದಶಮಿಯಂದು ದೇವಸ್ಥಾನದಲ್ಲಿ ರಥೋತ್ಸವ. ಅದು ಮುಗಿಯಿತೆಂದರೆ ಇವರ ಜೀವನ ಬೆಂಗಳೂರಲ್ಲಿ ಪ್ರಾರಂಭ. ಈ ಬಗ್ಗೆ ಅವರು ಯಾರೊಡನೆಯೂ ಉಸಿರಿರಲಿಲ್ಲ. ಯಾವ ದಿನ ಹೊರಡಬೇಕು, ಬೆಂಗಳೂರಲ್ಲಿ ಹೋದ ಕೂಡಲೇ ಏನು ಮಾಡಬೇಕು ಇದನ್ನೆಲ್ಲಾ ನಿರ್ಧರಿಸ ಬೇಕಿತ್ತು. ಅದರಲ್ಲಿ ಗಂಗೆ ಪಾತ್ರ ಏನೂ ಇರಲಿಲ್ಲ.

## ದಸರಾ ನೋಡಿ ಸಂಭ್ರಮಿಸಿದ ಪೋರಿ

ಈ ದಿನ ವಿಜಯದಶಮಿ ಸಂಭ್ರಮ. ಅರಮನೆಯಿಂದ ಬನ್ನೀಮಂಟಪ ತನಕ ಜಗತ್ ಪ್ರಸಿದ್ಧ ದಸರಾ ಮೆರವಣಿಗೆ ಇತ್ತು. ಇಡೀ ಮೈಸೂರ ಜನ ಆ ಬೀದಿಲಿ ತುಂಬಿ ಹೋಗಿರುತ್ತಾರೆ. ಹಿಂದೆಲ್ಲಾ ರಾಜರ ಮೆರವಣಿಗೆ ಇತ್ತು. ಈಗ ಭುವನೇಶ್ವರಿಯ ಮೆರವಣಿಗೆ ನಾಡಹಬ್ಬದ ಹೆಸರಲ್ಲಿ ಮಾಡುತ್ತಾರೆ. ಮಿಕ್ಕೆಲ್ಲ ಹಿಂದಲ ವೈಭವ ಹಾಗೇ ಇದ್ದು, ಪಟ್ಟದಾನೆ, ಕುದುರೆ, ಸೈನಿಕರ ಸಂಗೀತ ವಾದ್ಯ, ಸ್ತಬ್ಧ ಚಿತ್ರಗಳು.

ಅದೇ ದಿನ ವೃದ್ಧ ಕೆಂಪಣ್ಣ ತಮ್ ಜೀವನವನ್ನೇ ಮುಡಿಪಿಟ್ಟು ಈ ದೇವಸ್ಥಾನದಲ್ಲಿ ರಥೋತ್ಸವದ ಸಂಭ್ರಮ. ಬೆಳಗಿನ ವೇಳೆ ತೇರು ಎಳೆಯುವುದರಿಂದ ಮಧ್ಯಾಹ್ನದ ದಸರ ಮೆರವಣಿಗೆ ನೋಡ ಬೇಕಿದ್ದವರು ದೌಡಾಯಿಸಿ ಹೋಗಬಹುದು. ಹೀಗಾಗಿ ದೇವಸ್ಥಾನದಲ್ಲಿ ತಕ್ಕಮಟ್ಟಿಗೆ ಜನ ಸೇರುತ್ತಿದ್ದರು. ಗಂಗೆ ಜೊತೆಯಲ್ಲಿ ಪಾಪುವೂ ರಥೋತ್ಸವದ ನೋಡಲು ಜನ ಸಂದಣಿ ನಡುವೆ ನಿಂತಳು. ರಥ ಹೊರಡಲು ತಯಾರಾಗಿತ್ತು. ಇನ್ನೇನು ಆ ಪುಷ್ಪಾಲಂಕೃತ ತೇರು ಹೊರಟಿತು ಎನ್ನುವಾಗ ಜನ ಸಮೂಹ ಜೋರಾಗಿ ಜೈಕಾರ ಮಾಡುತ್ತಾ ಬಾಳೆ ಹಣ್ಣುಗಳನ್ನು ತೂರ ತೊಡಗಿದರು. ಗಂಗ ತೇರಿನ ಮೇಲೆ ಇದ್ದವರನ್ನೇ ಗಮನಿಸಿದಳು. ಅಲ್ಲಿ ಪ್ರಸಾದಪ್ಪ ಕಾಣಲಿಲ್ಲ. ಅವನು ತೇರಿನ ಹಿಂದೆ ನಡೆದು ಬರುತ್ತಿರುವುದು ಅವಳಿಗೆ ಕಾಣಿಸಿತು. ಅವನ ಜೊತೆ ದೇವಸ್ಥಾನದ ಕಮಿಟಿ ಸದಸ್ಯರೆಲ್ಲಾ ಇದ್ದರು.

ಪಾಪೂ ಸಹ ಅವನನ್ನು ಗುರುತಿಸಿ ಸಂತೋಷದಿಂದ ಕೂಗಿಕೊಂಡೇ

'ಯವ್ವಾ.... ಪ್ರಸಾದಪ್ಪ ಅಲ್ಲಿದ್ದಾರೆ ನೋಡೂ....'

'ಶ್! ಸುಮ್ಮನಿರವ್ವಾ.... ಹಂಗೆಲ್ಲಾ ಕೂಗಬಾರದು....'

'ಅವ್ರು ಇತ್ತ ಕಡೇನೇ ಬರ್ತಿದಾರೆ.... ನನ್ನ ಮುಟ್ತಾರಾ?.... ಅವ್ರಿಗೆ ನನ್ನ ಕಂಡ್ರೆ ಬಾಳ ಇಷ್ಟ....'

'ಇಲ್ಲವ್ವಾ.... ಜನ ಇರೂವಾಗ ಅವ್ರು ನಿನ್ನ ಮುಟ್ಟೊಲ್ಲ'...ಈನೂ ಅವ್ರುನ್ನ ಮಾತಾಡಿಸಬಾರ್ದು...'

'ಯಾಕಾ?....'

'ಅದು ಹಂಗೇ .... ನಾವು ಮೂರು ಜನ ಇದ್ದಾಗ ಮಾತ್ರ ಅವ್ರು ನಮ್ಮನ್ನ ಮಾತಾಡಸ್ತಾರ...'

'ಎಲ್ರೂ ಇರೂವಾಗ ಯಾಕೆ ಮಾತಾಡೊಲ್ಲರು?....'

'ಪೋರೀ.... ಹೇಳ್ದಷ್ಟು ಕೇಳವ್ವಾ.... ಇಲ್ಲಿ ನಾವು ಬಂದಿರೋದು ದೇವ್ರಿಗೆ ಕೈಮುಗಿಯೋಕೆ.... ದೇವ್ರನ್ನ ಮಾತ್ರಾ ನೋಡ್ತಾ ಕೈ ಮುಗಿ .... ನೀನು ಎಲ್ಲೆಲ್ಲೋ ನೋಡ್ತಾ, ಏನೇನೋ ಮಾತಾಡ್ತಿದ್ರ.... ದೇವ್ರಿಗೆ ಸಿಟ್ಟು ಬರತೈತಿ.....'

ಪಾಪು ಮುಖ ಇಳಿದು ಹೋಯಿತು. ತೇರು ಅವಳನ್ನು ದಾಟಿ ಹೋಯಿತು. ಅದನ್ನೇ ನೋಡುತ್ತಾ ಸುಮ್ಮನೆ ಕೈ ಜೋಡಿಸಿ ನಿಂತು ಬಿಟ್ಟಳು. ಪಕ್ಕದಲ್ಲೇ ಹಾದು ಹೋದ ಪ್ರಸಾದನನ್ನು ತಪ್ಪಿಯೂ ಅವಳು ನೋಡಲಿಲ್ಲ. ದೇವರು ಸಿಟ್ಟು ಮಾಡಿಕೊಳ್ಳುವುದು ಅವಳಿಗೆ ಬೇಕಿರಲಿಲ್ಲ? ಅಲ್ಲಿದ್ದ ಪರಿಚಿತ ಜನರೆಲ್ಲಾ ಪ್ರಸಾದನ ಚೈತನ್ಯ ತುಂಬಿದ ಮುಖ ನೋಡಿ ಆಶ್ಚರ್ಯಪಟ್ಟರು. ಅವನ ಭುಜ ಎಂದಿನಂತೆ ಬಾಗಿಕೊಂಡಿರಲಿಲ್ಲ. ಎಣ್ಣೆ ಇಲ್ಲದ ದೀಪ ಜ್ವಾಲೆ ಸೊರಗುತ್ತಿದ್ದಾಗ ಯಾರೋ ಎಣ್ಣೆ ತುಂಬಿದಂತೆ ಅವನು ಜ್ವಲಿಸುತ್ತಿದ್ದ. ಮುಖದಲ್ಲಿ ಹೊಸ ಕಳೆ. ಹೊದ್ದ ಉತ್ತರೀಯ, ಪಂಚೆ ಎಲ್ಲಾ ಅಪ್ಪಟ ರೇಶ್ಮೆಯದ್ದಾಗಿತ್ತು. ಯಾರೋ ಭಕ್ತರು ದೇವರಿಗೆ ಹರಕೆ ಸಲ್ಲಿಸಿ ನಂತರ ಪ್ರಸಾದನಿಗೆ ದಾನ ಮಾಡಿದ ವಸ್ತ್ರ ಇವನನ್ನು ಮದುವಣಗಿನಂತೆ ಮಾಡಿತ್ತು. ಈ ದಿನ ಮೇಲೇ ನೋಡಲಿ. ಹೀಗೆ ಹೊಸತನ ಚೆಲ್ಲುತ್ತಿದ್ದರೂ ಮನಸ್ಸಿನಲ್ಲಿ ಕೊರಗು ಅವನಿಗೆ ಮಾತ್ರ ಗೊತ್ತಿತ್ತು. ಇಷ್ಟು ದಿನ ಒಂದು ಅಳುಕು ಈಗ ಮತ್ತೊಂದು ಕೊರಗು. ತನ್ನ ತಂದೆ, ಈ ದೇವಸ್ಥಾನದ ಸೇವೆ ಈ ಆಪ್ತಜನ ಎಲ್ಲವನ್ನೂ ಶಾಶ್ವತವಾಗಿ ಬಿಟ್ಟು ಹೋಗುವ ಕಾಲ ಸನಿಹಕ್ಕೆ ಬಂದಿದೆ. ಆದರೆ ಹುಟ್ಟಿದವರೆಲ್ಲಾ ಒಂದು ದಿನ ಎಲ್ಲಾ ತೊರೆದು ಹೋಗಲೇಬೇಕಲ್ಲಾ. ಅದಕ್ಯಾಕೆ ಕೊರಗಬೇಕು ಎಂದು ಸಮಾಧಾನ ಮಾಡಿಕೊಂಡು ಮೃತ ಶಯ್ಯೆಯಲ್ಲಿರುವ ಕೆಲವರು ಛಲದಿಂದ ತಮ್ಮ ಕರ್ತವ್ಯಗಳನ್ನು ಮುಗಿಸಿ ನೆಮ್ಮದಿಯಿಂದ ಕೊನೆ ಉಸಿರು ಎಳೆಯುವುದುಂಟು. ತಾನೂ ಕರ್ತವ್ಯ ವಿಮುಖನಾಗದೆ, ಮಾಡಿಡುವ ಕೆಲಸ ಕಾರ್ಯಗಳನ್ನು ಒಂದ ರೂಪಕ್ಕೆ ತಂದಿಟ್ಟೇ ಹೋಗುತ್ತಿರುವೆನೆಂದುಕೊಂಡ. ಏನೋ ಹೊಸ ಶಕ್ತಿ ಅವನನ್ನು ನಡೆಸುತ್ತಿತ್ತು. ಆರುವ ಮುನ್ನ ಜ್ಯೋತಿ ಜೋರಾಗಿ ಬೆಳಗಿ ತನ್ನ ಶಕ್ತಿಯನ್ನೆಲ್ಲಾ ವ್ಯಯಿಸಿ ನಂತರ ನಂದಿಬಿಡುವುವುದೇ? ಎಂಬ ಒಂದು ಅನುಮಾನವೂ ಅವನಿಗೆ ತನ್ನ ದೇಹಸ್ಥಿತಿ ಮೇಲೇ ಅನುಮಾನ ಅದೇಕೊ ತಲೆಗೆ ಬಂದಿತ್ತು.

ರಥಾ ಸಾಗುತ್ತಿರುವಾಗ ಗಂಗೆ ಅವನನ್ನು ನೋಡುತ್ತ ನಿಂತಳು. ಅವನು ತನಗೆ ಎಷ್ಟು ಹತ್ತಿರದವನೊ ಈಗ ಸಾರ್ವಜನಿಕರ ನಡುವೆ ಅಷ್ಟೇ ಅಪರಿಚಿತನಾಗಿದ್ದಾನೆ. ಕೈಗೆಟುಕದಷ್ಟು ದೂರವಾಗಿ ತೋರುತ್ತಾನೆ. ಒಮ್ಮೆ ತನ್ನನ್ನು ಅವನು ತುದಿಗಣ್ಣಿನಿಂದ ನೋಡಿದರೆ ಧನ್ಯಳಾಗುತ್ತೇನೆ ಎಂದುಕೊಂಡಳವಳು.

ತಾವಿಬ್ಬರೂ ಮತ್ತು ಪಾಪು ತೋಟದಲ್ಲಿ ಕುಳಿತು ಕಳೆದ ಕ್ಷಣಗಳು ಅದೆಷ್ಟು ಆತ್ಮೀಯವಾಗಿದ್ದವು...! ಇದೇ ಪ್ರಸಾದಪ್ಪ ಇವರೇನೇಯೇ ಎಂದು ಚಕಿತಗೊಂಡಳು. ಇಲ್ಲಿ ಆತ ತನಗೆ ಏನೂ ಆಗುವವನಲ್ಲ...! ತಾನ್ಯಾರೊ ಈ ಪೂಜನೀಯ ಪ್ರಸಾದಪ್ಪ ಯಾರೋ! ಆತನ ಸುತ್ತಮುತ್ತ ಇರುವವರೆಲ್ಲ ಎಲ್ಲದರಲ್ಲೂ ಉಚ್ಚ ಜನಗಳು, ಈ ಊರಲ್ಲಿ ಪ್ರತಿಷ್ಠೆ ಉಳ್ಳವರು. ವಿಜ್ರಂಭಣೆಯ ಕಾರ್ಯಕ್ರಮದ ಮುಂಚೂಣಿಯಲ್ಲಿರುವ, ಎಲ್ಲರ ಗೌರವಕ್ಕೂ ಪಾತ್ರರಾಗಿರುವವರು. ಇಂತಹ ಉನ್ನತ ಜೀವನದಲ್ಲಿರುವ ಪ್ರಸಾದಪ್ಪನಿಗೆ ತನ್ನಿಂದಾಗಿ ಅದೆಷ್ಟು ಕೆಳ ಇಳಿತವಾಗಿ ಬಿಟ್ಟಿತು.

ಇಂದ್ರಾ ಗಾಂಧಿಗೆ ತಾಯಿಯ ತುಮುಲ ಅರ್ಥವಾಗುವಂತಿರಲಿಲ್ಲ. ಅವಳು ದೇವರಿಗಾಗಿ ಭಯಪಟ್ಟು ಇಷ್ಟೂ ಹೊತ್ತು ಸುಮ್ಮನಿದ್ದವಳು ಈಗ ಉತ್ಸವ ದೂರ ಹೊರಟು ಹೋದ ಮೇಲೆ ತಾಯಿಯನ್ನು ಕೇಳಿದಳು.

'ಅವ್ವಾ... ಪ್ರಸಾದಪ್ಪ ಈಗ ಬ್ಯಾರೇನೇ ಕಾಣ್ತಾರೆ... ತೋಟದಲ್ಲೇ ಬ್ಯಾರೆ ಕಾಣ್ತೆದ್ರು... ತೋಟದಲ್ಲಿ ನಮ್ಮ ಪಕ್ಕಾನೇ ಇದ್ರು... ಈಗ ನಾವು ಕಂಡರೂ ನೋಡೇದೇ ಇಲ್ಲ, ಮಾತಾಡೊಲ್ಲ ಯಾಕವ್ವ...?'

'ಪೋರೀ... ತೋಟದಲ್ಲಾದ ನಮ್ಮ ಭೇಟಿ ಯಾರಿಗೂ ತಿಳಿಯಬಾರದವ್ವ... ಜನ ತುಂಬಿರುವಾಗ ನೀನೂ ಏನೊ ಮಾತಾಡ್ಲಿಕ್ಕೆ ಹೊಂಟಿದ್ದೀ... ಬ್ಯಾಡವ್ವ... ಆ ಇಷ್ಯ ಇಲ್ಲಿ ಮಾತಾಡಬೇಡವ್ವಾ...'

'ಯಾಕಾ...? ನಂಗೆ ಹಾಂಗೇ ಅನ್ನಸ್ತು... ಈ ಪ್ರಸಾದಪ್ಪನೇ ಬ್ಯಾರೆ, ನಮ್ಮೊಂದಿಗೆ ಇರುವಾಗ ಇರುವ ಪ್ರಸಾದಪ್ಪನೇ ಬ್ಯಾರೆ ಅನ್ನೂ ಹಂಗೆ ಕಂಡಿತು... ಅದಕ್ಕಾ ಹಂಗೆ ಮಾತಾಡ್ತಿನವ್ವಾ...'

ಹಿಂದಿನಿಂದ ಯಾರೊ ಹೆಂಗಸಿನ ಧ್ವನಿಯಾಯಿತು, 'ಹೌದು ಮಗಾ... ನೀನು ಅನ್ನೋದು ನಿಜವೇ...! ಪ್ರಸಾದಪ್ಪ ಈ ದಿನ ಬ್ಯಾರೇನೇ ಕಾಣ್ತೆದಾರೆ... ಎಷ್ಟು ಚನ್ನಾಗಿದ್ದಾರಲ್ಲಾ...? ದೃಷ್ಟಿ ತಗಲೋ ಮದುಮಗನ ಹಾಗೆ

**ಫ್ಯಾನ್**
ವಿಶ್ರಾಂತಿ ಕೋಣೆಯಲ್ಲಿ
ವಿಶ್ರಾಂತಿ ರಹಿತವಾಗಿ
ಸುತ್ತುತ್ತಲಿತ್ತು
ಫ್ಯಾನ್!

—ವಿ.ಪುಗಳೇಂದಿ

